14 ವರ್ಷವೋ ಆಯಿತು ಅದು ಮುಗಿಯಬೇಕಾದರೆ. ನನಗೆ ಗೊತ್ತಿದೆ. ಆದ್ದರಿಂದ 18-20 ತಿಂಗಳಿಗೆ ಖಾಸಗೀ ಬಂಡವಾಳ 600 ಕೋಟಿ ಹಾಕಿದ ಮೇಲೆ ನಾವು ಬಲ್ಕ್ ಪರ್ಚೇಸ್ ಮಾಡಬೇಕಾಗುತ್ತದೆ ಎಂಬುದು ಒಂದು ಅಭಿಪ್ರಾಯ ಇದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದೆ ಹಾಗೆ ಬೆಂಗಳೂರು ನಗರದ ಅಭಿವೃದ್ಧಿಯ ಕೆಲಸಗಳ ಬಗ್ಗೆ ಗಮನ ಹರಿಸಬೇಕೆಂಬ ಕಾರಣಕ್ಕಾಗಿ ನಾನೇ ಆ ಪೋರ್ಟ್‌ಪೋಲಿಯೋ ಇಟ್ಟುಕೊಂಡಿದ್ದೇನೆ. ನನ್ನ ಜೋತೆಗೆ ಶ್ರೀಮಾನ್ ರೋಶನ್‌ಬೇಗ್‌ರವರು ಇದ್ದಾರೆ. ನಾನು ಕೇವಲ ಹಳ್ಳಿಯವರ ಕಡೆಗೆ ಮಾತ್ರ ಗಮನ ಕೊಡುತ್ತಾ ಇದ್ದೇನೆ ಎಂಬ ಆರೋಪ ಬರಬಾರದು ಎಂದು ಆ ಖಾತೆಯನ್ನು ನಾನೇ ಇಟ್ಟುಕೊಂಡಿದ್ದೇನೆ. ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಒಂದು ಕನ್‌ಸಲ್‌ಟೇಟೀವ್ ಕಮಿಟಿ ಮಾಡಿ ಎಂದು ಹೇಳಿದ್ದಾರೆ. ಎಲ್ಲಾ ಶಾಸಕರುಗಳನ್ನು ಒಳಗೊಂಡಂತೆ ಒಂದು ಕನ್‌ಸಲ್‌ಟೇಟಿವ್ ಕಮಿಟಿಯನ್ನು ಮಾಡಿ ಪ್ರತಿ ತಿಂಗಳೂ ಮೀಟಿಂಗ್ ಸೇರಿ ಚರ್ಚೆ ಮಾಡುವ ವ್ಯವಸ್ಥೆ ಮಾಡುತ್ತೇನೆ. ಕೇವಲ ಕುಡಿಯುವ ನೀರಿನ ಸಮಸ್ಯೆ ಮಾತ್ರ ಅಲ್ಲ, ಎಲ್ಲಾ ನಾಗರೀಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ, ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹಳ್ಳಿಯಿಂದ ಬರತಕ್ಕ ಶಾಸಕರಿಗೆ ಏನಾದರೂ ಅವಕಾಶ ಮಾಡಬೇಕೆಂದು ಹೇಳುವಾಗ ನಗರ ಪ್ರದೇಶಕ್ಕೆ ಏಕೆ ಆಗಬಾರದು ? ಇಲ್ಲಿಯೂ ಅಂಥ ಸಮಿತಿಯನ್ನು ಮಾಡೋಣ. ಮಾನ್ಯ ನಾಗೇಗೌಡರು ಒಂದು ವಿಷಯವನ್ನು ಹೇಳಿದರು. ಕಾವೇರಿ ನೀರು ಬರುವ ದಾರಿಯಲ್ಲಿ ಅನೇಕ ಸಣ್ಣಪುಟ್ಟ ನಗರಗಳು ಬರುತ್ತವೆ. ಅವುಗಳಿಗೆ ಕುಡಿಯುವ ನೀರು ಕೊಡಲು ಸರಕಾರದವರು ಮನಸ್ಸು ಮಾಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ನಾನು ಮನಸ್ಸು ಮಾಡುವುದಲ್ಲ. ಈ ಬಗ್ಗೆ ಹಿಂದೆ ಕೂಡ ಚರ್ಚೆಯಾಗಿದೆ. ಚರ್ಚೆಯಾಗಿ ಆ ಕುರಿತು ಒಪ್ಪಿಗೆ ಕೂಡ ಕೊಟ್ಟಿರತಕ್ಕಂಥಾದ್ದು ನನಗೆ ಗೊತ್ತಿರತಕ್ಕಂಥ ವಿಚಾರವಾಗಿದೆ. ಅದನ್ನು ಕೂಡ 4ನೇ ಹಂತದಲ್ಲಿ ಆಳವಡಿಸಿಕೊಂಡು ಮಾಡುತ್ತೇವೆ ಎಂಬ ಮಾತನ್ನು ಹೇಳಿ, ಮಾನ್ಯ ಕುಮಾರ್‌ರವರು ಮಿನಿವಾಟರ್‌ಗೆ ಕೊಟ್ಟಿರತಕ್ಕಂಥ ಹಣದ ಬಗ್ಗೆ ಹೇಳಿದರು. ಅದರಲ್ಲಿ ಗೊಂದಲ ಬೇಕಾಗಿಲ್ಲ. ನಾನಿಷ್ಟೇ ಹೇಳಬಯಸುತ್ತೇನೆ, ನೀವು ಕೊಟ್ಟಿರತಕ್ಕಂಥ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯಗತ ಮಾಡುತ್ತೇನೆ ಎಂಬ ಮಾತನ್ನು ಹೇಳಿ, ನಿಮ್ಮೆಲ್ಲರ ಸಹಕಾರದಿಂದ ಈ ಜ್ವಲಂತ ಸಮಸ್ಯೆಯನ್ನು ಬಗೆಹರಿಸಲು ಸರಕಾರವು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತದೆ ಎಂದು ಹೇಳಿ, ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಸನ್ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಬೆಳಿಗ್ಗೆ ತಿಪಟೂರಿನ ಶಾಸಕರಾದ ನಂಜಮರಿ ಮತ್ತು ಶ್ರೀಮಾನ್ ವಾಟಾಳ್ ನಾಗರಾಜ್‌ರವರು ತಿಪಟೂರಿನಲ್ಲಿ ನಡೆದ ಕೊಬ್ಬರಿ ವರ್ತಕರ ಹರತಾಳದ ಬಗ್ಗೆ ಗಮನ ಸೆಳೆದಿದ್ದರು. ಅದಕ್ಕೆ ಸಚಿವರು ಹೇಳಿಕೆ ಮಾಡಲಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ, ರೂರಲ್ ವಾಟರ್ ಸಪ್ಲೈ ಬಗ್ಗೆ ಮತ್ತು ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ, ಅದರ

ಬಗ್ಗೆ ತೆಗೆದುಕೊಳ್ಳುತ್ತೇನೆ ಎಂದು ತಾವು ಹೇಳಿದಿರಿ. ಈಗ ನನಗೆ ಗೊತ್ತಾಯಿತು, ಸಂಬಂಧಪಟ್ಟ ಮಂತ್ರಿಯವರು ಒಂದು ಕಾಗದವನ್ನು ಬರೆದಿದ್ದಾರೆ, ಅದರ ಪ್ರಕಾರ ಸೋಮವಾರ ಅದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಮುಂದಕ್ಕೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೀರಿ. ಸೆಷನ್ ಇರುವುದೇ ಐದಾರು ದಿನಗಳು. ಇದರಲ್ಲಿ ಕೂಡ ಮುಂದೆ, ಮುಂದೆ ಎಂದು ಹೇಳುತ್ತಾ ಹೋದರೆ ಯಾವಾಗ ತೆಗೆದುಕೊಳ್ಳುವುದು ? ಇದು ಬಹಳ ಮುಖ್ಯವಾದ ವಿಚಾರವಾಗಿದೆ. ತಾವು ದಯವಿಟ್ಟು ಸಚಿವರಿಗೂ ಹೇಳಿಬಿಡಿ. ಆದಿವೇಶನ ಕಾಲದಲ್ಲಿಯಾದರೂ ಅವರು ಟೂರ್ ಮಾಡುವುದು ಬೇಡ. ಬಾಕಿ ಆರು ತಿಂಗಳು ಹೇಗೂ ಇದ್ದೇ ಇದೆ. ಹೇಗೂ ಓಟ್ ಆನ್ ಅಕೌಂಟ್ಸ್ ತೆಗೆದುಕೊಂಡಿದ್ದೀರಿ. ನಿಮ್ಮನ್ನು ಅಷ್ಟರವರೆಗೆ ಕೇಳುವವರು ಇರುವುದಿಲ್ಲ.

ಅಧ್ಯಕ್ಷರು :- ತಾವು ನಾಳೆ ಊರಿನಲ್ಲಿ ಇರುತ್ತೀರಾ ? ನಾನು ಸಭೆ ಮುಗಿದ ತಕ್ಷಣ, ಇದನ್ನು ನೋಡಿ ವಿಚಾರ ಏನು ಎಂದು ತಿಳಿದುಕೊಂಡು ತಮಗೆ ತಿಳಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಸೆಕ್ರೆಟೇರಿಯೇಟ್‌ನವರು ಹೇಳಿದ್ದರಿಂದ ನಾನು ತಮಗೆ ಹೇಳುತ್ತಾ ಇದ್ದೇನೆ. ದಯವಿಟ್ಟು ಸೋಮವಾರ ಅದನ್ನು ಹಾಕಿಸಿ ಸಂಬಂಧಪಟ್ಟವರಿಗೆ ಇರಬೇಕೆಂದು ಹೇಳಿ. ------

ವಿಷಯ :- ಕೊಬ್ಬರಿ ಮೇಲೆ ವಿಧಿಸಿರುವ ತೆರಿಗೆಗೆ ಸಂಬಂಧಿಸಿದಂತೆ -----

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು):- ಕೊಬ್ಬರಿಯ ಮೇಲೆ ಮಾರಾಟ ಹಂತದಲ್ಲಿ ಶೆ. 3 ರಷ್ಟು ತೆರಿಗೆ ಹಾಲಾಗುತ್ತಿದ್ದು ಕೊಬ್ಬರಿ ಅಂತರ ರಾಜ್ಯದಲ್ಲಿ ಮಾರಾಟವಾದಾಗ ತೆರಿಗೆ ಭಾದ್ಯತೆ ಹೀಗಿದೆ :-

ಅ) ಮಾರಾಟವು ಕೇಂದ್ರ ಮಾರಾಟ ತೆರಿಗೆ ಅಧಿನಿಯಮ 1956ರ ಅಡಿಯಲ್ಲಿ ನಿಗದಿತ ಸಿ ಫಾರಂಗಳನ್ನು ಹೊಂದಿದ್ದರೆ ಶೆ. 3, ಇಲ್ಲದಿದ್ದರೆ ಶೆ. 4.

ಆ) ಕೇಂದ್ರ ಮಾರಾಟ ತೆರಿಗೆ ಕಾಯ್ದೆ(1956)ರ ಅಡಿಯಲ್ಲಿ ಘೋಷಿತ ಸರಕು (declared goods) ಗಳಲ್ಲಿ ಕೊಬ್ಬರಿಯೂ ಒಂದು. ಆದ್ದರಿಂದ, ಕರ್ನಾಟಕ ಮಾರಾಟ ತೆರಿಗೆಯನ್ನು ಕೊಟ್ಟ ಕೊಬ್ಬರಿಯ ಅಂತರರಾಜ್ಯ ವ್ಯಾಪಾರದಲ್ಲಿ ಮಾರಾಟವಾಗಿದ್ದು ಅದರ ಮೇಲೆ ಕೇಂದ್ರ ಮಾರಾಟ ತೆರಿಗೆ ಸಲ್ಲಿಸಲ್ಪಟ್ಟಿದ್ದರೆ, ಕರ್ನಾಟಕ ಮಾರಾಟ ತೆರಿಗೆಯನ್ನು ಅಂತರರಾಜ್ಯ ವ್ಯಾಪಾರದಲ್ಲಿ ಮಾರಾಟ ಮಾಡಿದವರಿಗೆ ವಾಪಸ್ಸು ಮಾಡಲಾಗುತ್ತದೆ.

ಅಂರರಾಜ್ಯ ವ್ಯಾಪಾರದಲ್ಲಿ ಮಾರಾಟವಾದ ಕೊಬ್ಬರಿಗೆ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಅಧಿಸೂಚನೆ ಸಂಖ್ಯೆ: ಎಫ್ ಡಿ 385 ಸಿಎಸ್ ಎಲ್ 75; ದಿನಾಂಕ 3-4- 1976ರಲ್ಲಿ ಕೇಂದ್ರ ಮಾರಾಟ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ :-

(1) ವ್ಯಾಪಾರಿಯು ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ (1957)ರ ಅಡಿಯಲ್ಲಿ ತೆರಿಗೆ ವಿಧಿತವಾಗಿದೆ ಎಂದು ಸಾಬೀತು ಮಾಡಬೇಕು.

(2) ಅಂತರರಾಜ್ಯ ವ್ಯಾಪಾರ ಮಾಡುವ ವರ್ತಕರು ಸಿ ಫಾರಂಗಳನ್ನು ಸಲ್ಲಿಸಬೇಕು.

(3) ಕರ್ನಾಟಕ ಮಾರಾಟ ತೆರಿಗೆ ಕೊಟ್ಟದನ್ನು ವ್ಯಾಪಾರಿಯು ವಾಪಸ್ಸು ಕೇಳಬಾರದು.

ತಿಪಟೂರಿನ ಕೆಲವು ವರ್ತಕರು ಸದರಿ ಅಧಿಸೂಚನೆಯ ಸೌಲಭ್ಯವನ್ನು ಬಯಸುವರಾದರೂ ಮೇಲೆ ಹೇಳಿದ ಎರಡನೆ ಷರತ್ತನ್ನು ಪಾಲಿಸಿರುವುದಿಲ್ಲ.

ಆದ್ದರಿಂದ, ಅಂತಹ ವರ್ತಕರಿಗೆ ಆ ಅಧಿಸೂಚನೆಯು ಅನ್ವಯವಾಗುವುದಿಲ್ಲವೆಂದು ಭಾವಿಸಿ ಕರ ನಿರ್ಧರಣಾಧಿಕಾರಿಯವರು ಅಂತರರಾಜ್ಯ ವ್ಯಾಪಾರಗಳ ಮೇಲೆ ಶೇ.4ರ ಕೇಂದ್ರ ಮಾರಾಟ ತೆರಿಗೆಯನ್ನು ವಿಧಿಸಿ (ಸಿ ಫಾರಂ ಇಲ್ಲದಿರುವ ಸಂದರ್ಭಗಳಲ್ಲಿ) ಶೇ.3 ರಷ್ಟು ಕರ್ನಾಟಕ ಮಾರಾಟ ತೆರಿಗೆಯನ್ನು ಮರು ಪಾವತಿ ಮಾಡುವ ಆದೇಶ ಮಾಡಿದ್ದಾರೆ. ಕರ ನಿರ್ಧರಣಾಧಿಕಾರಿಗಳ ಈ ಕ್ರಮವು ಕಾನೂನಿನ ಪ್ರಕಾರವೇ ಇರುತ್ತದೆ.

ವರ್ಷಕ್ಕೆ ರೂ. 1.5 ಲಕ್ಷಕ್ಕಿಂತಲೂ ಹೆಚ್ಚು ತೆರಿಗೆ ಪಾವತಿ ಮಾಡುವ ಪ್ರಕರಣಗಳನ್ನು ನಿರ್ಧರಿಸುವ ತುಮಕೂರಿನ ವಾಣಿಜ್ಯ ತೆರಿಗೆ ಉಪ ಆಯುಕ್ತರು (ನಿರ್ಧರಣೆ) ಇವರ ಕಚೇರಿಯ ವ್ಯಾಪ್ತಿಗೆ ಬರುವ ತಿಪಟೂರಿನ ವರ್ತಕರು ನಿರ್ಧರಣೆ ಮಾಡಲಾದ ತೆರಿಗೆಯನ್ನು ಪಾವತಿ ಮಾಡಿರುತ್ತಾರೆ. ಆದರೆ, ವರ್ಷಕ್ಕೆ 1.5 ಲಕ್ಷಕ್ಕಿಂತ ಕಡಿಮೆ ತೆರಿಗೆ ಪಾವತಿ ಮಾಡುವ ಪ್ರಕರಣಗಳಲ್ಲಿ ಸಹಾಯಕ ವಾಣಿಜ್ಯ ತೆರಿಗೆ ಆಯುಕ್ತರು, ತಿಪಟೂರು ಇವರ ಕಚೇರಿ ವ್ಯಾಪ್ತಿಗೆ ಬರುವ ವರ್ತಕರು ಕಾನೂನು ಪ್ರಕಾರ ಕೊಡಬೇಕಾಗಿರುವ ತೆರಿಗೆಯನ್ನು ಪಾವತಿ ಮಾಡುವುದಿಲ್ಲವೆಂದು ಪ್ರತಿಭಟಿಸುತ್ತಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಈಗ ರೈತರಿಗೆ ಪರಿಹಾರ ಏನು ? ವರ್ತಕರ ನಿಲುವಿನಿಂದ ರೈತರಿಗೆ ತೊಂದರೆಯಾಗುತ್ತದೆ. ಇದರ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ಮಾಡಬೇಕಲ್ಲಾ ?

ಶ್ರೀ ಸಿದ್ಧರಾಮಯ್ಯ:- ಇಲ್ಲಿ ಏನಾಗಿದೆ ಅಂದರೆ ತಿಪಟೂರಿನ ವರ್ತಕರು ಸಿ ಫಾರಮ್ಮನ್ನು 1992-93ರಲ್ಲಿ ಕೇಳಲಿಲ್ಲ, ನಾವು ಕೊಟ್ಟಿಲ್ಲ. ಈಗ ಅವರು ಕೇಳುತ್ತಾ ಇದ್ದಾರೆ. ಈಗ ಅದನ್ನು ತೆಗೆದು ಹಾಕಬೇಕೆಂಬ ವಿಚಾರ ಇದೆ. ಕಾನೂನು ಪ್ರಕಾರ ಅಂತರರಾಜ್ಯದಲ್ಲಿ ಮಾರಾಟವಾಗತಕ್ಕಂಥ ವಸ್ತುಗಳ ಮೇಲೆ ವರ್ತಕರು ಸಿ ಫಾರಂಗಳನ್ನು ಸಲ್ಲಿಸಬೇಕು. ತಿಪಟೂರಿನ ಕೆಲವು ವರ್ತಕರು ಅಧಿಸೂಚನೆಯ ಸೌಲಭ್ಯವನ್ನು ಬಯಸುತ್ತಾರಾದರೂ ಹೇಳಿಕೆಯಲ್ಲಿ ನೀಡಿದ ಎರಡನೇ ಷರತ್ತನ್ನು ಪಾಲಿಸಿರುವುದಿಲ್ಲ. ವರ್ತಕರ ಸಮಸ್ಯೆಗಳನ್ನು ಕೂಡ ಗಮನದಲ್ಲಿಟ್ಟುಕೊಂಡು ರೈತರಿಗೆ ತೊಂದರೆಯಾಗದಂತೆ ಪರಿಹಾರವನ್ನು ಕಂಡುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಕೂಡ ವರ್ತಕರೇ ಆಗಿದ್ದಾರೆ. ಅವರ ಜೊತೆಗೆ ಮಾತನಾಡಿದ್ದೇನೆ.

ವರ್ತಕರು ಸಿ ಫಾರ್ಮ್ ಕೊಡುವುದೇ ಇಲ್ಲ ಎಂದು ಹೇಳುವುದು ತಪ್ಪು.

ಶ್ರೀ ಬಿ.ನಂಜಾಮರಿ :- ಮಾನ್ಯ ಅಧ್ಯಕ್ಷರೇ, ಈ ಕುರಿತಾಗಿ ಇರುವ ವಾದವನ್ನು ಪರಿಹರಿಸಬೇಕು. ಇಲ್ಲದಿದ್ದರೆ ಜಿಲ್ಲೆಯ ರೈತರಿಗೆ ತುಂಬಾ ತೊಂದರೆಯಾಗುತ್ತದೆ. ಆ ಬಗ್ಗೆ ಮಾನ್ಯ ಸಚಿವರು ಭರವಸೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಸಿ ಫಾರ್ಮ್ ಕೊಡಲೇಬೇಕೆಂದು ನೀವು ಹೇಳುತ್ತೀರಿ. ಅವರು ಕೊಡುವುದಿಲ್ಲ ಎಂದು ಹೇಳುತ್ತಾರೆ. ಹಾಗಾದರೆ ಇದಕ್ಕೆ ಒಂದು ಪರಿಹಾರ ಬೇಕಲ್ಲಾ ? ಆದ್ದರಿಂದ ಯಾರು ಅಲ್ಲಿ ವರ್ತಕರು ಪ್ರತಿಭಟನೆ ಮಾಡುತ್ತಾ ಇದ್ದಾರೆ, ಅವರನ್ನು ಕರೆಸಿ ಒಂದು ಇತ್ಯರ್ಥ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಿ.

ಶ್ರೀ ಸಿದ್ಧರಾಮಯ್ಯ :- ನಾನು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುವುದೇನೆಂದರೆ, ನೀವು ಚಳುವಳಿ ಹಾದಿಯನ್ನು ಬಿಡಿ. ರೈತರಿಗೆ ಯಾವುದೇ ತೊಂದರೆಯಾಗ ಕೂಡದು. ಯಾಕೆಂದರೆ ಕಾನೂನು ರೀತ್ಯಾ ಅಧಿಕಾರಿಗಳು ಕೇಳಲಿಲ್ಲ, ನಾವು ಕೊಡಲಿಲ್ಲ, ಸಿ ಫಾರ್ಮ್ ನಿಲ್ಲಿಸಿ ಎಂದು ಹೇಳುವುದು ಸರಿಯಲ್ಲ. ಅದಕ್ಕಾಗಿ ಈಗ ಅವರು ಒಂದು ಪರ್ಸೆಂಟ್ ಕೊಡಬೇಕಾಗುತ್ತದೆ. ಸಿಫಾರ್ಮ್ ತೋರಿಸದೆ ಹೋದರೆ ಅವರು ಒಂದು ಪರ್ಸೆಂಟ್ ಹೆಚ್ಚು ಕೊಡಬೇಕಾಗುತ್ತದೆ. ಇರುವ ಸಮಸ್ಯೆಯ ಬಗ್ಗೆ ಕುಳಿತು ಚರ್ಚೆ ಮಾಡೋಣ. ಅದನ್ನು ಬಿಟ್ಟು ಚಳುವಳಿ ಹಾದಿ ಹಿಡಿದು ರೈತರಿಗೆ ತೊಂದರೆ ಕೊಡುವ ಕೆಲಸವನ್ನು ಮಾಡುವುದು ಬೇಡ. ಮಾನ್ಯ ಸದಸ್ಯರು ತಮ್ಮ ಸ್ನೇಹಿತರುಗಳಿಗೆ ಹೇಳಿ, ಸೋಮವಾರ ಎಲ್ಲರೂ ಕುಳಿತುಕೊಂಡು ಒಂದು ಇತ್ಯರ್ಥಕ್ಕೆ ಬರೋಣ.

ಅಧ್ಯಕ್ಷರು :- ಸಭೆಯು ತನ್ನ ದಿನದ ಕಾರ್ಯಕಲಾಪಗಳನ್ನು ಇಲ್ಲಿಗೆ ಮುಗಿಸಿ ಮತ್ತೆ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸಭೆಯು 7- 10 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ 27- 3- 1995 ರಂದು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು) ------

ಈ ಚಿಹ್ನೆಯು ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿರುವುದಿಲ್ಲವೆಂದು ಸೂಚಿಸುತ್ತದೆ.

★★★★★★★★★